**All India Radio: Bangalore**
**National Bulletin In Kannada**
**18.03.2025  07.35 a.m.**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
***************

ಮುಖ್ಯಾಂಶಗಳು

೧. ನವದೆಹಲಿಯಲ್ಲಿ ೯ನೇ ಆವೃತ್ತಿಯ ಭಾರತ-ಆಸ್ಟ್ರೇಲಿಯಾ ರಕ್ಷಣಾ ನೀತಿ ಮಾತುಕತೆ

೨. ಪ್ರಧಾನಮಂತ್ರಿ ಇಂಟರ್ನ್‌ಶಿಪ್ ಯೋಜನೆಗೆ ಮೀಸಲಾದ ಆಪ್ ಬಿಡುಗಡೆಗೊಳಿಸಿದ ಕೇಂದ್ರ ಹಣಕಾಸು ಸಚಿವ ನಿರ್ಮಲಾ ಸೀತಾರಾಮನ್

೩. ರಷ್ಯಾ-ಉಕ್ರೇನ್ ಸಂಘರ್ಷ ಕೊನೆಗಾಣಿಸಲು ಇಂದು ರಷ್ಯಾ- ಅಮೆರಿಕಾ ಅಧ್ಯಕ್ಷರ ನಡುವೆ ಸಮಾಲೋಚನೆ

೪. ೨೦೨೮ರ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ನಲ್ಲಿ ಬಾಕ್ಸಿಂಗ್ ಮರುಸೇರ್ಪಡೆಗೆ ಅಂತಾರಾಷ್ಟ್ರೀಯ ಒಲಿಂಪಿಕ್ ಸಮಿತಿ ಅನುಮೋದನೆ

***************

ಒಂಬತ್ತನೇ ಆವೃತ್ತಿಯ ಭಾರತ-ಆಸ್ಟ್ರೇಲಿಯಾ ರಕ್ಷಣಾ ನೀತಿ ಮಾತುಕತೆ ನವದೆಹಲಿಯಲ್ಲಿ ನಿನ್ನೆ ನಡೆಯಿತು.

ಸಭೆಯಲ್ಲಿ, ಉಭಯ ಕಡೆಯವರು ಪರಸ್ಪರ ಹಿತಾಸಕ್ತಿಯ ಪ್ರಾದೇಶಿಕ ಮತ್ತು ಜಾಗತಿಕ ವಿಷಯಗಳ ಕುರಿತು ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡರು. ಭಾರತೀಯ ನಿಯೋಗದ ನೇತೃತ್ವವನ್ನು ಜಂಟಿ ಕಾರ್ಯದರ್ಶಿ ಅಮಿತಾಭ್ ಪ್ರಸಾದ್ ಮತ್ತು ಆಸ್ಟ್ರೇಲಿಯಾದ ನಿಯೋಗದ ನೇತೃತ್ವವನ್ನು ಆಸ್ಟ್ರೇಲಿಯಾದ ರಕ್ಷಣಾ ಇಲಾಖೆಯ ಅಂತಾರಾಷ್ಟ್ರೀಯ ನೀತಿ ವಿಭಾಗದ ಮೊದಲ ಸಹಾಯಕ ಕಾರ್ಯದರ್ಶಿ ಬರ್ನಾರ್ಡ್ ಫಿಲಿಪ್ ವಹಿಸಿದ್ದರು.

ಸಭೆ ಕುರಿತಂತೆ ರಕ್ಷಣಾ ಸಚಿವಾಲಯ ಹೇಳಿಕೆ ಬಿಡುಗಡೆಗೊಳಿಸಿದ್ದು, ಶಾಂತಿಯುತ, ಸ್ಥಿರ ಮತ್ತು ಸಮೃದ್ಧ ಇಂಡೋ-ಪೆಸಿಫಿಕ್ ಪ್ರದೇಶವನ್ನು ಉತ್ತೇಜಿಸಲು ಭಾರತ ಮತ್ತು ಆಸ್ಟ್ರೇಲಿಯಾ ಒಟ್ಟಾಗಿ ಕೆಲಸ ಮಾಡಲು ಬದ್ಧವಾಗಿವೆ. ಸಭೆಯಲ್ಲಿ, ಸಮರಾಭ್ಯಾಸಗಳು ಸೇರಿದಂತೆ ದ್ವಿಪಕ್ಷೀಯ ರಕ್ಷಣಾ ಸಹಕಾರದ ನಿರಂತರ ಪ್ರಗತಿಯನ್ನು ಉಭಯ ನಿಯೋಗಗಳು ಸ್ವಾಗತಿಸಿವೆ. ಕಡಲ ಕ್ಷೇತ್ರದ ಅರಿವು, ಪರಸ್ಪರ ಮಾಹಿತಿ ಹಂಚಿಕೆ, ಕೈಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಸಹಯೋಗ ಸೇರಿದಂತೆ ವಿವಿಧ ಸಹಕಾರದ ಆದ್ಯತಾ ವಿಷಯಗಳ ಮೇಲೆ ಚರ್ಚೆಗಳು ಕೇಂದ್ರೀಕರಿಸಿದ್ದವು ಎಂದು ಸಚಿವಾಲಯ ತಿಳಿಸಿದೆ.

****************

ಪ್ರಧಾನಿ ನರೇಂದ್ರ ಮೋದಿ ನವದೆಹಲಿಯಲ್ಲಿ ನಿನ್ನೆ ನ್ಯುಜಿಲೆಂಡ್ ಸಹವರ್ತಿ ಕ್ರಿಸ್ಟೊಫರ್ ಲಕ್ಸನ್ ಅವರೊಂದಿಗೆ ೧೦ನೇ ಆವೃತ್ತಿಯ ರೈಸಿನಾ ಸಂವಾದ ೨೦೨೫ ಅನ್ನು ಉದ್ಘಾಟಿಸಿದರು.

ಉದ್ಘಾಟನಾ ಅಧಿವೇಶನದಲ್ಲಿ ಮುಖ್ಯ ಭಾಷಣ ಮಾಡಿದ ನ್ಯೂಜಿಲೆಂಡ್ ಪ್ರಧಾನಿ ಕ್ರಿಸ್ಟೋಫರ್ ಲಕ್ಸನ್, ಮುಂಬರುವ ವರ್ಷಗಳಲ್ಲಿ ಇಂಡೋಫೆಸಿಫಿಕ್ ಪ್ರದೇಶ ಜಾಗತಿಕ, ಆರ್ಥಿಕ ಬೆಳವಣಿಗೆ ಮೂರನೇ ಎರಡಷ್ಟು ಪಾಲನ್ನು ಹೊಂದಲಿದೆ ಹಾಗೂ ೨೦೩೦ರ ವೇಳೆಗೆ ಜಗತ್ತಿನ ಮೂರನೇ ಎರಡಷ್ಟು ಮಧ್ಯಮ ವರ್ಗದ ಗ್ರಾಹಕರಿಗೆ ನೆಲೆಯಾಗಲಿದೆ ಎಂದರು.

ಧ್ವನಿ: ಕ್ರಿಸ್ಟೊಫರ್ ಲಕ್ಸನ್

ನಿನ್ನೆ ಆರಂಭವಾದ ಮೂರು ದಿನಗಳ ರೈಸಿನಾ ಸಂವಾದ ನಾಳೆಯವರೆಗೆ ನಡೆಯಲಿದೆ. ಕಾಲಚಕ್ರ - ಜನರು, ಶಾಂತಿ ಮತ್ತು ಭೂಮಿ ಎಂಬುದು ಈ ವರ್ಷದ ಸಂವಾದದ ಧ್ಯೇಯವಾಕ್ಯವಾಗಿದೆ. ಈ ಕಾರ್ಯಕ್ರಮದ ಸಂದರ್ಭದಲ್ಲಿ, ಜಾಗತಿಕ ನಾಯಕರು, ಚಿಂತಕರು ಮತ್ತಿತರರು ಹಲವು ವಿಷಯಾಧಾರಿತ ಚರ್ಚೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

****************

ಕೇಂದ್ರ ಹಣಕಾಸು ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವೆ ನಿರ್ಮಲಾ ಸೀತಾರಾಮನ್ ನವದೆಹಲಿಯಲ್ಲಿ ನಿನ್ನೆ ಪ್ರಧಾನಮಂತ್ರಿ ಇಂಟರ್ನ್‌ಶಿಪ್ ಯೋಜನೆಗಾಗಿ ಮೀಸಲಾದ ಮೊಬೈಲ್ ಅಪ್ಲಿಕೇಶನ್ ಅನ್ನು ಬಿಡುಗಡೆ ಮಾಡಿದರು. ಈ ಆಪ್ ಸ್ವಚ್ಛ ವಿನ್ಯಾಸ ಮತ್ತು ಸುಲಭ ಬಳಕೆಯೊಂದಿಗೆ ಸುಗಮ ಇಂಟರ್ಫೇಸ್, ಆಧಾರ್ ಮುಖ ದೃಢೀಕರಣದ ಮೂಲಕ ಸುಲಭ ನೋಂದಣಿ ಮತ್ತು ಅಭ್ಯರ್ಥಿಗಳ ಹೊಸ ನವೀಕರಣಗಳ ಬಗ್ಗೆ ತಿಳಿದುಕೊಳ್ಳಲು ಮಾಹಿತಿ ಸೇರಿದಂತೆ ವಿವಿಧ ಸೌಲಭ್ಯಗಳನ್ನು ಒದಗಿಸುತ್ತದೆ.

ಕಾರ್ಯಕ್ರಮದಲ್ಲಿ ಮಾತನಾಡಿದ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್, ಶಿಕ್ಷಣ ಮತ್ತು ಉದ್ಯಮಗಳ ನಿರೀಕ್ಷೆಗಳ ನಡುವಿನ ಅಂತರವನ್ನು ಕಡಿಮೆ ಮಾಡುವ ಸಾಮರ್ಥ್ಯವನ್ನು ಪ್ರಧಾನ ಮಂತ್ರಿ ಇಂಟರ್ನ್‌ಶಿಪ್ ಯೋಜನೆ ಹೊಂದಿದೆ. ಇದರಿಂದಾಗಿ ಯುವಕರ ಉದ್ಯೋಗಾವಕಾಶ ಹೆಚ್ಚಾಗುತ್ತದೆ ಎಂದರು.

ಈ ಯೋಜನೆಯಲ್ಲಿ ಉದ್ಯಮಗಳ ಸಕ್ರಿಯ ಭಾಗವಹಿಸುವಿಕೆ, ದೇಶದಲ್ಲಿ ಕೌಶಲ್ಯಪೂರ್ಣ ಕಾರ್ಯಪಡೆಯನ್ನು ಬೆಳೆಸುವುದರ ಜೊತೆಗೆ ರಾಷ್ಟ್ರ ನಿರ್ಮಾಣಕ್ಕೆ ಕೊಡುಗೆ ನೀಡಲು ಅವಕಾಶ ಒದಗಿಸುತ್ತವೆ ಎಂದು ಸಚಿವರು ಹೇಳಿದರು.

ಧ್ವನಿ: ನಿರ್ಮಲಾ ಸೀತಾರಾಮನ್

ಪ್ರಧಾನ ಮಂತ್ರಿ ಇಂಟರ್ನ್‌ಶಿಪ್ ಯೋಜನೆಯನ್ನು ೨೦೨೪-೨೫ರ ಬಜೆಟ್‌ನಲ್ಲಿ ಘೋಷಿಸಲಾಯಿತು. ಐದು ವರ್ಷಗಳಲ್ಲಿ ಅಗ್ರ ೫೦೦ ಕಂಪನಿಗಳಲ್ಲಿ ಒಂದು ಕೋಟಿ ಯುವಕರಿಗೆ ಇಂಟರ್ನ್‌ಶಿಪ್ ಅವಕಾಶಗಳನ್ನು ಒದಗಿಸುವ ಗುರಿಯನ್ನು ಇದು ಹೊಂದಿದೆ. ಈ ಯೋಜನೆಯ ಒಂದು ಭಾಗವಾಗಿ, ಕಳೆದ ವರ್ಷ ಅಕ್ಟೋಬರ್‌ನಲ್ಲಿ ಯುವಕರಿಗೆ ೧.೨೫ ಲಕ್ಷ ಇಂಟರ್ನ್‌ಶಿಪ್

ಅವಕಾಶಗಳನ್ನು ಒದಗಿಸುವ ಗುರಿಯನ್ನು ಹೊಂದಿರುವ ಉಪಯೋಜನೆಯನ್ನು ಪ್ರಾರಂಭಿಸಲಾಯಿತು.

***************

ದೆಹಲಿ ವಿಧಾನಸಭೆ ನೂತನವಾಗಿ ಆಯ್ಕೆಯಾದ ಸದಸ್ಯರಿಗೆ ನವದೆಹಲಿಯಲ್ಲಿ ಇಂದು ಎರಡು ದಿನಗಳ ಓರಿಯಂಟೇಶನ್ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಈ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಶಾಸಕರಿಗೆ ಸಂಸದೀಯ ಕಾರ್ಯವಿಧಾನಗಳು, ನೀತಿ ಸಂಹಿತೆ ಮತ್ತು ಅತ್ಯುತ್ತಮ ಆಡಳಿತ ಪದ್ಧತಿಗಳ ಕುರಿತು ಮಾಹಿತಿ ನೀಡುವ ಗುರಿಯನ್ನು ಈ ಕಾರ್ಯಕ್ರಮ ಹೊಂದಿದೆ.

ಉದ್ಘಾಟನಾ ಅಧಿವೇಶನದಲ್ಲಿ ದೆಹಲಿ ವಿಧಾನಸಭೆ ಸಭಾಧ್ಯಕ್ಷ ವಿಜೇಂದರ್ ಗುಪ್ತಾ, ಉಪಸಭಾಧ್ಯಕ್ಷ ಮೋಹನ್ ಸಿಂಗ್ ಬಿಸ್ಟ್, ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಮತ್ತು ವಿರೋಧ ಪಕ್ಷದ ನಾಯಕಿ ಅತಿಶಿ ಸೇರಿದಂತೆ ಮತ್ತಿತರರು ಭಾಗವಹಿಸಲಿದ್ದಾರೆ.

ಕಾರ್ಯಕ್ರಮದ ಕುರಿತು ಮಾತನಾಡಿರುವ ಸಭಾಧ್ಯಕ್ಷ ವಿಜೇಂದರ್ ಗುಪ್ತಾ, ಶಾಸಕರ ಶಾಸಕಾಂಗ ಸಾಮರ್ಥ್ಯಗಳನ್ನು ಬಲಪಡಿಸಲು ಈ ಕಾರ್ಯಕ್ರಮ ಒಂದು ಪ್ರಮುಖ ಉಪಕ್ರಮವಾಗಿದೆ. ಇದು ಅವರಿಗೆ ಸಂಸದೀಯ ಕಾರ್ಯವಿಧಾನಗಳು, ಶಾಸಕಾಂಗ ರಚನೆ ಮತ್ತು ಅರ್ಥಪೂರ್ಣ ಚರ್ಚೆಗಳ ಮಹತ್ವವನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ ಹಾಗೂ ವಿಧಾನಸಭೆಯಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸಲು ಅನುವು ಮಾಡಿಕೊಡುತ್ತದೆ ಎಂದಿದ್ದಾರೆ.

ಎರಡು ದಿನಗಳ ಕಾರ್ಯಕ್ರಮ, ತಜ್ಞರ ಉಪನ್ಯಾಸಗಳು, ವಿಚಾರಗೋಷ್ಠಿ ಮತ್ತು ಉತ್ತಮ ಆಡಳಿತ, ನೀತಿ ನಿರೂಪಣೆ ಮತ್ತು ಶಾಸಕಾಂಗ ಚೌಕಟ್ಟುಗಳ ಮೇಲೆ ಕೇಂದ್ರೀಕರಿಸಿದ ಸಂವಾದಾತ್ಮಕ ಅಧಿವೇಶನಗಳನ್ನು ಒಳಗೊಂಡಿರುತ್ತದೆ.

***************

ಉಕ್ರೇನ್ ಸಂಘರ್ಷವನ್ನು ಕೊನೆಗೊಳಿಸುವ ಕುರಿತು ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಮತ್ತು ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇಂದು ಮಾತುಕತೆ ನಡೆಸಲಿದ್ದಾರೆ ಎಂದು ರಷ್ಯಾ ದೃಢಪಡಿಸಿದೆ. ರಷ್ಯಾ ವಕ್ತಾರ ಡಿಮಿಟ್ರಿ ಪೆಸ್ಕೋವ್, ಇಬ್ಬರು ನಾಯಕರ ನಡುವಿನ ಮಾತುಕತೆಗೆ ಸಿದ್ಧತೆಗಳು ನಡೆಯುತ್ತಿವೆ ಎಂದು ಹೇಳಿದ್ದಾರೆ. ಉಕ್ರೇನ್‌ನಲ್ಲಿ ಯುದ್ಧವನ್ನು ಕೊನೆಗೊಳಿಸುವ ಪ್ರಯತ್ನಗಳ ಭಾಗವಾಗಿ, ತಮ್ಮ ರಷ್ಯಾದ ಸಹವರ್ತಿಗಳೊಂದಿಗೆ ಚರ್ಚೆ ನಡೆಸುವ ಯೋಜನೆಯನ್ನು ಅಧ್ಯಕ್ಷ ಟ್ರಂಪ್ ನಿನ್ನೆ ಪ್ರಕಟಿಸಿದ್ದರು. ಮಾತುಕತೆಯಲ್ಲಿ ಭೂ ಮತ್ತು ವಿದ್ಯುತ್ ಸ್ಥಾವರಗಳು ಪ್ರಮುಖ ವಿಷಯಗಳಾಗಿವೆ ಎಂದು ಅವರು ಉಲ್ಲೇಖಿಸಿದ್ದರು.

****************

ಇದೇ ೩೧ ರಂದು ಸಾರ್ವಜನಿಕ ರಜಾದಿನವಾಗಿದ್ದರೂ, ತೆರಿಗೆದಾರರಿಗೆ ಅನುಕೂಲವಾಗುವಂತೆ ಎಲ್ಲಾ ಬ್ಯಾಂಕುಗಳು ವಹಿವಾಟುಗಳಿಗೆ ತೆರೆದಿರುತ್ತವೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ತಿಳಿಸಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿಯೇ ಸರ್ಕಾರಿ ರಶೀದಿಗಳು ಮತ್ತು ಪಾವತಿಗಳ ಲೆಕ್ಕಪತ್ರವನ್ನು ಸುಲಭಗೊಳಿಸಲು ದೇಶಾದ್ಯಂತ ವಿಶೇಷ ಕ್ಲಿಯರಿಂಗ್ ಕಾರ್ಯಾಚರಣೆಗಳನ್ನು ನಡೆಸಲು ಅಗತ್ಯ ವ್ಯವಸ್ಥೆಗಳನ್ನು ಮಾಡಲಾಗಿದೆ ಎಂದು ಆರ್‌ಬಿಐ ಅಧಿಸೂಚನೆಯಲ್ಲಿ ತಿಳಿಸಿದೆ. ಬ್ಯಾಂಕುಗಳಿಗೆ ಪ್ರತ್ಯೇಕ ಸೂಚನೆಗಳನ್ನು ನೀಡಿರುವ ಆರ್‌ಬಿಐ ಇದೇ ೩೧ ರಂದು ಸಾಮಾನ್ಯ ಕೆಲಸದ ಸಮಯದವರೆಗೆ ಓವರ್-ದಿ-ಕೌಂಟರ್ ವಹಿವಾಟುಗಳಿಗೆ ಶಾಖೆಗಳನ್ನು ತೆರೆದಿಡಲು ಸೂಚಿಸಿದೆ.

****************

೨೦೧೪ರಿಂದ ಹೆಚ್ಚುವರಿ ೨೩೮ ಗಿಗಾವ್ಯಾಟ್ ವಿದ್ಯುತ್ ಉತ್ಪಾದನೆ ಮೂಲಕ ವಿದ್ಯುತ್ ಕೊರತೆಯ ಸಮಸ್ಯೆಯನ್ನು ಸರ್ಕಾರ ಪರಿಹರಿಸಿದೆ ಎಂದು ಕೇಂದ್ರ ಇಂಧನ ಖಾತೆ ರಾಜ್ಯ ಸಚಿವ ಶ್ರೀಪಾದ್ ನಾಯಕ್ ಹೇಳಿದ್ದಾರೆ.

ರಾಜ್ಯಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಲಿಖಿತ ಉತ್ತರ ನೀಡಿದ ಅವರು, ಹೆಚ್ಚುವರಿ ವಿದ್ಯುತ್ ಪ್ರದೇಶಗಳಿಂದ ವಿದ್ಯುತ್ ಕೊರತೆಯ ಪ್ರದೇಶಗಳಿಗೆ ವಿದ್ಯುತ್ ವರ್ಗಾವಣೆಯನ್ನು ಸುಗಮಗೊಳಿಸಲು ಬಲಿಷ್ಠ ರಾಷ್ಟ್ರೀಯ ಗ್ರಿಡ್ ಅನ್ನು ಸ್ಥಾಪಿಸಲಾಗಿದೆ ಎಂದು ಅವರು ತಿಳಿಸಿದರು.

೨೦೨೧-೨೨ ರ ವೇಳೆಗೆ ಕಲ್ಲಿದ್ದಲು ಆಧಾರಿತ ಕನಿಷ್ಠ ೮೦ ಸಾವಿರ ಮೆಗಾವ್ಯಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಘಟಕ ಸ್ಥಾಪಿಸಲು ಸರ್ಕಾರ ಮುಂದಾಗಿದೆ ಎಂದು ಸಚಿವ ಶ್ರೀಪಾದ್ ನಾಯಕ್ ಮಾಹಿತಿ ನೀಡಿದರು.

***************

ಸಗಟು ಬೆಲೆ ಸೂಚ್ಯಂಕ-ಡಬ್ಲ್ಯೂ ಪಿಐ ಹಣದುಬ್ಬರವು ಕಳೆದ ತಿಂಗಳು ಫೆಬ್ರವರಿಯಲ್ಲಿ ಶೇಕಡ ೨.೩೮ ರಷ್ಟು ಏರಿಕೆಯಾಗಿದೆ.

ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಇಂದು ಬಿಡುಗಡೆ ಮಾಡಿದ ದತ್ತಾಂಶದ ಪ್ರಕಾರ, ಸಸ್ಯಜನ್ಯ ಎಣ್ಣೆ ಮತ್ತು ಪಾನೀಯಗಳಂತಹ ತಯಾರಿಸಿದ ಆಹಾರ ಪದಾರ್ಥಗಳ ಬೆಲೆ ಏರಿಕೆಯಿಂದಾಗಿ ಫೆಬ್ರವರಿಯಲ್ಲಿ ಹಣದುಬ್ಬರ ಏರಿಕೆಯಾಗಿದೆ.

ಈ ವರ್ಷದ ಜನವರಿಯಲ್ಲಿ ಸಗಟು ಬೆಲೆ ಸೂಚ್ಯಂಕ ಹಣದುಬ್ಬರ ಶೇಕಡ ೨.೩೧ ರಷ್ಟಿತ್ತು.

ದತ್ತಾಂಶದ ಪ್ರಕಾರ, ಫೆಬ್ರವರಿಯಲ್ಲಿ ತರಕಾರಿ ಬೆಲೆಗಳು ಇಳಿಕೆ ಕಂಡಿವೆ. ಸಗಟು ಬೆಲೆ ಸೂಚ್ಯಂಕ ಆಹಾರ ಹಣದುಬ್ಬರ, ೨೦೨೫ರ ಜನವರಿಯಲ್ಲಿ ಶೇಖಡ ೭.೪೭ ರಿಂದ ಫೆಬ್ರವರಿಯಲ್ಲಿ ಶೇಖಡ ೫.೯೪ ಕ್ಕೆ ಇಳಿದಿದೆ. ಆಲೂಗಡ್ಡೆ ಬೆಲೆಯು ಹಿಂದಿನ ತಿಂಗಳಲ್ಲಿ ಶೇಖಡ ೭೪.೨೮ ರಿಂದ ಶೇಖಡ ೨೭.೫೪ ಕ್ಕೆ ಇಳಿದಿವೆ.

***************

'ಮಹಾರಾಷ್ಟ್ರದ ಸೆಂಟ್ರಲ್ ನಾಗ್ಪುರದ ಮಹಲ್ ಪ್ರದೇಶದಲ್ಲಿ ನಿನ್ನೆ ಸಂಜೆ ಧಾರ್ಮಿಕ ಚಿಹ್ನೆಗಳನ್ನು ಧ್ವಂಸ ಮಾಡಲಾಗಿದೆ ಎಂಬ ವದಂತಿಗಳ ಬೆನ್ನಲ್ಲೆ ಎರಡು ಗುಂಪುಗಳ ನಡುವೆ ಸಂಘರ್ಷ

ಉಂಟಾಯಿತು. ಇದರ ಪರಿಣಾಮವಾಗಿ ಪರಿಸ್ಥಿತಿ ಉಲ್ಬಣಗೊಂಡು ಕೆಲವು ಕಿಡಿಗೇಡಿಗಳು ಕಲ್ಲು ತೂರಾಟ ನಡೆಸಿ, ಹತ್ತಿರದ ವಾಹನಗಳಿಗೆ ಬೆಂಕಿ ಹಚ್ಚಿದ ಘಟನೆ ವರದಿಯಾಗಿದೆ.

ಗಲಭೆಯನ್ನು ನಿಯಂತ್ರಿಸಲು ನಿಯೋಜಿಸಲಾದ ಪೊಲೀಸ್ ಪಡೆಗಳು ಚಿಟ್ನಿಸ್ ಪಾರ್ಕ್ ಮತ್ತು ಮಹಲ್ ಪ್ರದೇಶಗಳಲ್ಲಿ ಗುಂಪನ್ನು ಚದುರಿಸಲು ಅಶ್ರುವಾಯು ಶೆಲ್‌ಗಳು ಮತ್ತು ಲಾಠಿ ಪ್ರಹಾರಗಳನ್ನು ನಡೆಸಿದವು.

***************

ಅಂತಾರಾಷ್ಟ್ರೀಯ ಒಲಿಂಪಿಕ್ ಸಮಿತಿ-ಐಒಸಿ ೨೦೨೮ರ ಲಾಸ್ ಏಂಜಲೀಸ್ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಬಾಕ್ಸಿಂಗ್ ಅನ್ನು ಸೇರಿಸಲು ಅನುಮೋದನೆ ನೀಡಿದೆ. ಕಳೆದ ತಿಂಗಳು ಐಒಸಿ ವಿಶ್ವ ಬಾಕ್ಸಿಂಗ್‌ಗೆ ತಾತ್ಕಾಲಿಕ ಮಾನ್ಯತೆ ನೀಡಿದ ನಂತರ ಈ ನಿರ್ಧಾರವು ಅಂತರರಾಷ್ಟ್ರೀಯ ಬಾಕ್ಸಿಂಗ್ ಅಸೋಸಿಯೇಷನ್ (ಐಬಿಎ) ಹೊರತುಪಡಿಸಿ ಹೊಸ ಆಡಳಿತ ಮಂಡಳಿಗೆ ಅಧಿಕಾರವನ್ನು ವರ್ಗಾಯಿಸಿದಂತಾಗಿದೆ. ಈ ನಿರ್ಧಾರವನ್ನು ಸ್ವಾಗತಿಸುತ್ತಾ, ವಿಶ್ವ ಬಾಕ್ಸಿಂಗ್ ಅಧ್ಯಕ್ಷ ಬೋರಿಸ್ ವ್ಯಾನ್ ಡೆರ್ ವೋರ್ಸ್ಟ್, ಇದು ಒಲಿಂಪಿಕ್ ಬಾಕ್ಸಿಂಗ್‌ಗೆ ಬಹಳ ಮಹತ್ವದ ನಿರ್ಧಾರವಾಗಿದೆ ಮತ್ತು ಬಾಕ್ಸಿಂಗ್ ಒಲಿಂಪಿಕ್ ಗೆ ಪುನಃಸೇರ್ಪಡೆಯ ಒಂದು ಹೆಜ್ಜೆ ಎಂದು ಹೇಳಿದರು.

***************

ಇಂಗ್ಲೆಂಡ್‌ನ ವೊಲ್ವರ್‌ಹ್ಯಾಂಪ್ಟನ್‌ನಲ್ಲಿ ನಡೆಯುತ್ತಿರುವ ೨೦೨೫ ರ ಕಬಡ್ಡಿ ವಿಶ್ವಕಪ್‌ನ ಡಿ ಗುಂಪಿನ ಪಂದ್ಯದಲ್ಲಿ ಇಂದು ಸಂಜೆ ಭಾರತೀಯ ಮಹಿಳಾ ತಂಡವು ವೇಲ್ಸ್‌ನೊಂದಿಗೆ ಸೆಣಸಲಿದೆ. ಈ ಪಂದ್ಯವು ಭಾರತೀಯ ಕಾಲಮಾನ ಸಂಜೆ ೫:೩೦ಕ್ಕೆ ಪ್ರಾರಂಭವಾಗುವುದು. ಬಿ ಗುಂಪಿನ ಪಂದ್ಯದಲ್ಲಿ ರಾತ್ರಿ ೧೦:೩೦ಕ್ಕೆ ಭಾರತದ ಪುರುಷರ ತಂಡ, ಸ್ಕಾಟ್ಲೆಂಡ್‌ನೊಂದಿಗೆ ಸೆಣಸಾಟ ನಡೆಸಲಿದೆ.

೨೦೨೫ ರ ಕಬಡ್ಡಿ ವಿಶ್ವಕಪ್‌ಗೆ ನಿನ್ನೆ ಚಾಲನೆ ದೊರೆಯಿತು. ತಮ್ಮ ಮೊದಲ ಪಂದ್ಯದಲ್ಲಿ ಭಾರತೀಯ ಪುರುಷರ ತಂಡ ಇಟಲಿಯನ್ನು ೬೪-೨೨ ಅಂತರದಿಂದ ಸೋಲಿಸುವ ಮೂಲಕ

ಗೆಲುವಿನ ಅಭಿಯಾನವನ್ನು ಪ್ರಾರಂಭಿಸಿತು. ಇದಕ್ಕೂ ಮೊದಲು, ಉದ್ಘಾಟನಾ ಪಂದ್ಯದಲ್ಲಿ, ಆತಿಥೇಯ ಇಂಗ್ಲೆಂಡ್ ಹಂಗೇರಿಯನ್ನು ೧೦೧-೨೫ ಅಂತರದಿಂದ ಸೋಲಿಸಿತು.

ಪುರುಷ ಮತ್ತು ಮಹಿಳಾ ವಿಭಾಗಗಳಲ್ಲಿ ಭಾರತ ಹಾಲಿ ಚಾಂಪಿಯನ್ ಆಗಿ ಪಂದ್ಯಾವಳಿಯನ್ನು ಪ್ರವೇಶಿಸಿದೆ.

ಪುರುಷರ ಸ್ಪರ್ಧೆಯಲ್ಲಿ, ೧೦ ತಂಡಗಳನ್ನು ಎ ಮತ್ತು ಬಿ ಎರಡು ಗುಂಪುಗಳಾಗಿ ವಿಂಗಡಿಸಲಾಗಿದೆ - ಭಾರತವು ಇಟಲಿ, ಸ್ಕಾಟ್ಲೆಂಡ್, ವೇಲ್ಸ್ ಮತ್ತು ಹಾಂಗ್ ಕಾಂಗ್ ಜೊತೆಗೆ ಬಿ ಗುಂಪಿನಲ್ಲಿ ಸ್ಥಾನ ಪಡೆದರೆ, ಮಹಿಳೆಯರ ವಿಭಾಗದಲ್ಲಿ ಆರು ತಂಡಗಳು ಭಾಗವಹಿಸಲಿದ್ದು, ಎರಡು ಗುಂಪುಗಳಾಗಿ ವಿಂಗಡಿಸಲಾಗಿದೆ. ಗುಂಪಿನಲ್ಲಿ ವೇಲ್ಸ್ ಮತ್ತು ಪೋಲೆಂಡ್ ವಿರುದ್ಧ ಸ್ಪರ್ಧಿಸಲಿದೆ.

***************